**ಕವಿತೆ**




## ಸತ್ಯಾನಂದ ಪಾತ್ರೋಟ

ಕಲೆ: ಗುರು ರಾಘವೇಂದ್ರ





# ಸ್ಪರ್ಶ-ಅಸ್ಪೃಶ್ಯ

ನೆರಳಿಗೆ
ಸ್ಪರ್ಶ, ಅಸ್ಪೃಶ್ಯ
ಇದ್ದಿದ್ದರೆ
ಅದು ನನ್ನ ಜೊತೆ
ಇರುತ್ತಿರಲಿಲ್ಲ

ನೀರಿಗೆ, ದಾರಿಗೆ, ಬೆಳಕಿಗೆ
ಸ್ಪರ್ಶ, ಅಸ್ಪೃಶ್ಯ
ಇದ್ದಿದ್ದರೆ
ನಾನಿಲ್ಲಿ ಬದುಕುತ್ತಿರಲಿಲ್ಲ

ಮೋಡಕೆ
ಮೈಲಿಗೆ ಇದ್ದಿದ್ದರೆ
ಮಳೆ ಬರುತ್ತಿರಲಿಲ್ಲ
ಇಳೆ ಮೇಲೆ ಹರಿಯುತ್ತಿರಲಿಲ್ಲ
ಹಸಿರು ಚಿಗುರುತ್ತಿರಲಿಲ್ಲ
ಹೂವು ಅರಳುತ್ತಿರಲಿಲ್ಲ

ಗಾಳಿಗೆ
ಮೈಲಿಗೆ ಇದ್ದಿದ್ದರೆ
ಅದು, ಯಾರನ್ನು ಮುಟ್ಟುತ್ತಿರಲಿಲ್ಲ
ಕನಸಿಗೆ ಏಣಿಯಾಗುತ್ತಿರಲಿಲ್ಲ

ಮಣ್ಣಿಗೆ
ಮೈಲಿಗೆ ಇದ್ದಿದ್ದರೆ
ಅದು ಯಾರನ್ನೂ
ತನ್ನೊಡಲಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ

ಮುಟ್ಟಾಟಕ್ಕೆ
ಮೈಲಿಗೆ ಇದ್ದಿದ್ದರೆ
ಜೀವ ಮೊಳಕೆಯೊಡೆಯುತ್ತಿರಲಿಲ್ಲ
ಪ್ರೀತಿಗೆ
ಹೊಸ ಭಾಷ್ಯ ಬರೆಯುತ್ತಿರಲಿಲ್ಲ
ಯಾವುದು ಸ್ಪರ್ಶ
ಯಾವುದು ಅಸ್ಪೃಶ್ಯ
ನನಗೀಗಲು ಅರ್ಥವಾಗುತ್ತಿಲ್ಲ
ಅರ್ಥವಾಗುವಷ್ಟರಲ್ಲಿ
ನಾನಿಲ್ಲಿ ಇರುವುದಿಲ್ಲ